DH
DECCAN HERALD
Mangaluru, Friday January 5, 2018
Pages 18 Vol 21 No 5 ₹6.00 M www.deccanherald.com


CENTRAL LIBRARY



**Proof of age not required at Sabarimala, says TDB**

Page 12





# Sahyadri Conclave to be held from January 6 to 10

**MANGALURU: Sahyadri Engineering College will organise a five-day 'Sayadri Conclave' at Sahyadri campus, Adyar, from January 6 to 10.**

Addressing reporters here on Thursday, Principal Prof U M Bhushi said that the conclave will be inaugurated on January 6 at 4 pm by Tirumala Tirupati temple chief priest Dr Ramana Deekshithulu.

Higher Education Minister Basavaraj Rayareddy will inaugurate the conclave while Minister for Planning, Statistics, Science and Technology M R Seetharam will inaugurate the project exhibition.

IIT, Allahabad former Director Dr M D Tiwari, Allcargo Logistics, Mumbai Founder and Chairman Dr Shashi Kiran Shetty and Dr B R Ambedkar Medical College, Bengaluru president Radhakrishna will be among the guests at the conclave.

About 1,200 students spanning from various streams - High School, Pre-University, UG and PG in Basic Sciences, Engineering and Management will participate in the conclave.

The event will span over five days which will cover sessions such as Interaction with Nobel Laureates, Panel Discussion with Scientists, Technocrats and Entrepreneurs, and other sessions on technology and management.

There will be technical sessions related to current technological advancements which will be delivered by renowned professors and technocrats.

Noble laureates Ada E Yonath (Nobel Prize in Chemistry, 2009) and Serge Haraoche (Nobel Prize in Physics, 2012), International Scientists including Joseph Sifakis (Turing Award in Computer Science, 2007) Leeds University, UK Scientific Researcher in Robotics Robert C Richardson, University of Buffalo, US President, Satish K Tripathi, Florida University, Professor, S S Iyengar and Ohio University, US professor Anish Arora will take part in various sessions in the conclave.

There will be cultural programmes every day from 6pm to 8pm.

To enrol visit: www.sahyadri-conclave.com

Chief Co-ordinator Dr C K Manjunath and Co-ordinator Anush Bekal were present at the press meet.

**DH News Service**



ಇಂದಿನಿಂದ ದ.ಆಫ್ರಿಕಾ ವಿರುದ್ಧ ಮೊದಲ ಟೆಸ್ಟ್ ಆರಂಭ 11

ಕೇರಳದಲ್ಲಿ ಲವ್ ಜಿಹಾದ್ ಇಲ್ಲವಂತೆ: ಕೇರಳ ಸರ್ಕಾರ ವರದಿ 9

ಶೇ.7.75 ಉಳಿತಾಯ ಬಾಂಡ್ ಮಾರುಕಟ್ಟೆಗೆ 10

ಪ್ರಧಾನಿ ಮೋದಿಗೆ ಗಲ್ ಮೊಬೈಲ್ ನೀಡಲಿದ್ದಾರೆ ಇಸ್ರೇಲ್ ಪ್ರಧಾನಿ 10

ಮಂಗಳೂರು
ಶುಕ್ರವಾರ
5 ಜನವರಿ 2018
ಹೇಮಲಂಬಿ ಸಂವತ್ಸರ, ಉತ್ತರಾಯಣ (ದೃಗ್ಗಣಿತ ಅನುಸಾರ), ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ; ಚೌತಿ, ನಕ್ಷತ್ರ : ಮಘೆ
ಬೆಲೆ ₹ 5.00

# ಹೊಸ ದಿಗಂತ HD

ಸಂಪುಟ 39, ಸಂಚಿಕೆ 279, ಪುಟಗಳು 12+4+4 ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at kodiali


ನೋಬೆಲ್ ಪುರಸ್ಕೃತರು, ವಿಶ್ವ ಖ್ಯಾತಿಯ ವಿಜ್ಞಾನಿಗಳು ಭಾಗಿ

## ಜ.6-10: ಸಹ್ಯಾದ್ರಿಯಲ್ಲಿ ವಿಜ್ಞಾನ ಮಹಾ ಸಮಾವೇಶ

- ಸುಮಾರು 40 ವಿಜ್ಞಾನಿಗಳು ಮತ್ತು ಸುಮಾರು 60 ಹೆಸರಾಂತ ವಿಜ್ಞಾನಿಗಳ ಜತೆಯಲ್ಲಿ ಸಂವಾದ
- 1,200 ವಿದ್ಯಾರ್ಥಿ ಪ್ರತಿನಿಧಿಗಳು ಭಾಗಿ

ದಿಗಂತ ವರದಿ: ಮಂಗಳೂರು, ಜ.4

ನಗರದ ಹೊರ ವಲಯ ಅಡ್ಯಾರಿನ ಸಹ್ಯಾದ್ರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜ.6ರಿಂದ 10ರ ತನಕ ವಿಜ್ಞಾನ ಮಹಾ ಸಮಾವೇಶ ಜರುಗಲಿದೆ. ಸಮಾವೇಶದಲ್ಲಿ ಸುಮಾರು 1,500ಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸುವರು. ನೋಬೆಲ್ ಪ್ರಶಸ್ತಿ ವಿಜೇತರು, ಜಗದ್ವಿಖ್ಯಾತ ವಿಜ್ಞಾನಿಗಳು, ಸಂಶೋಧಕರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಸಹ್ಯಾದ್ರಿ ತಾಂತ್ರಿಕ ಮಹಾವಿದ್ಯಾಲಯದ ನಿರ್ದೇಶಕ ಪ್ರೊ.ಡಿ.ಎಲ್.ಪ್ರಭಾಕರ್ ಗುರುವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಸಮಾವೇಶದ ವಿವರಗಳನ್ನು ನೀಡಿದರು.

ಸಮಾವೇಶದಲ್ಲಿ ಪಾಲ್ಗೊಳ್ಳುವ ಪ್ರತಿನಿಧಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ವಿಶ್ವಖ್ಯಾತಿಯ ಸುಮಾರು 40 ವಿಜ್ಞಾನಿಗಳು ಮತ್ತು ಸುಮಾರು 60 ಹೆಸರಾಂತ ವಿಜ್ಞಾನಿಗಳ ಜತೆಯಲ್ಲಿ ಸಂವಾದ ಮಾಡುವ ಅವಕಾಶ ಪ್ರತಿನಿಧಿಗಳಿಗೆ ಲಭಿಸಲಿದೆ. ಪ್ರೌಢಶಾಲೆ, ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಪ್ರತಿನಿಧಿಗಳಾಗಿ ಭಾಗವಹಿಸುವರು. 8 ಗುಂಪುಗಳಲ್ಲಿ ಚರ್ಚೆ ನಡೆಯಲಿದೆ ಎಂದು ಪ್ರೊ.ಪ್ರಭಾಕರ್ ನುಡಿದರು.

1,200 ವಿದ್ಯಾರ್ಥಿ ಪ್ರತಿನಿಧಿಗಳು ಪಾಲ್ಗೊಳ್ಳುವ ಸಮಾವೇಶದಲ್ಲಿ ನೀರು, ಇಂಧನ, ಪರಿಸರ ಮತ್ತು ಆರೋಗ್ಯ ಕುರಿತಾಗಿ ಚರ್ಚೆ ನಡೆಯಲಿದೆ. ಸಾಮಾಜಿಕ ಬದ್ಧತೆಯ ನೆಲೆಯಲ್ಲಿ ಸಹ್ಯಾದ್ರಿ ಕಾಲೇಜು ಸಮಾವೇಶವನ್ನು ನಡೆಸುತ್ತಿದೆ. ಕಳೆದ ಒಂದು ವರ್ಷದಿಂದ ಸಮಾವೇಶಕ್ಕಾಗಿ ಸಿದ್ಧತೆ ನಡೆಸಲಾಗಿದೆ ಎಂದು ಅವರು ವಿವರಿಸಿದರು.

ಜ.6ರ ಸಂಜೆ 4 ಗಂಟೆಗೆ ವಿಜ್ಞಾನ ಮಹಾ ಸಮಾವೇಶ ಉದ್ಘಾಟನೆಗೊಳ್ಳಲಿದೆ. ತಿರುಪತಿ ಕ್ಷೇತ್ರದ ಪ್ರಧಾನ ಅರ್ಚಕ ಡಾ.ರಮಣ ದೀಕ್ಷಿತಲು ಸಮಾವೇಶಕ್ಕೆ ಚಾಲನೆ ನೀಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್.ಸೀತಾರಾಮ, ಐಐಐಟಿ ಅಲಹಾಬಾದ್‌ನ ವಿಶ್ರಾಂತ ನಿರ್ದೇಶಕ ಡಾ.ಎಂ.ಡಿ.ತಿವಾರಿ, ಆಲ್ ಕಾರ್ಗೊ ಲಾಜಿಸ್ಟಿಕ್ಸ್ ಅಧ್ಯಕ್ಷ ಡಾ.ಶಶಿಕಿರಣ್ ಶೆಟ್ಟಿ ಮತ್ತು ಬೆಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯದ ಅಧ್ಯಕ್ಷ ರಾಧಾಕೃಷ್ಣ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರೊ.ಪ್ರಭಾಕರ್ ಹೇಳಿದರು.

ಜ.10ರ ಮಧ್ಯಾಹ್ನ ಒಂದು ಗಂಟೆಗೆ ಸಮಾವೇಶದ ಸಮಾರೋಪ ಸಮಾರಂಭ ನಡೆಯಲಿದೆ. ನೋಬೆಲ್ ಪ್ರಶಸ್ತಿ ಪುರಸ್ಕೃತರಾದ ಅದಾ ಇ.ಯೋನತ್, ಸೆರ್ಜೆ ಹರ್ ವೋಚೆ, ರಾಜ್ಯದ ಐಟಿ-ಬಿಟಿ ಮತ್ತು ಪ್ರವಾಸೋದ್ಯಮ ಸಚಿವ ಪ್ರಿಯಾಂಕ ಖರ್ಗೆ, ಐಟಿ-ಬಿಟಿ ಮತ್ತು ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ಗೌರವ ಗುಪ್ತ, ಎನ್‌ಐಟಿಕೆಯ ನಿರ್ದೇಶಕ ಪ್ರೊ. ಕರಣಂ ಮಹೇಶ್ವರ ರಾವ್ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಸ್.ಎಲ್ ಭೈರಪ್ಪ ಗೌರವ ಅತಿಥಿಗಳಾಗಿ ಭಾಗವಹಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಉಮೇಶ ಭೂಷಿ, ಪರಿಸರ ಮಂಡಳಿ ಮಾಜಿ ಅಧ್ಯಕ್ಷ ಪ್ರೊ.ಮಂಜಪ್ಪ, ಸಮಾವೇಶದ ಪ್ರಧಾನ ಸಂಯೋಜಕ ಡಾ.ಸಿ.ಕೆ.ಮಂಜುನಾಥ, ಸಹ ಸಂಯೋಜಕ ಅನುಷ್ ಬೇಕಲ್ ಉಪಸ್ಥಿತರಿದ್ದರು.

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಶುಕ್ರವಾರ, ಜನವರಿ 5, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 16+

CENTRAL LIBRARY

# ಜ. 6-10: ಸಹ್ಯಾದ್ರಿ ಸಮಾವೇಶ

## ವಿದ್ಯಾರ್ಥಿಗಳು, ನೋಬೆಲ್ ಪುರಸ್ಕೃತರು, ವಿಜ್ಞಾನಿಗಳ ಸಂವಾದ

ಮಂಗಳೂರು, ಜ. 4: ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಇದೇ ಮೊದಲ ಬಾರಿಗೆ ವಿಜ್ಞಾನ ವಿಷಯದಲ್ಲಿ 'ಸಹ್ಯಾದ್ರಿ ಸಮಾವೇಶ'ವನ್ನು ಜ. 6ರಿಂದ 10ರ ವರೆಗೆ ಆಯೋಜಿಸಲಾಗಿದೆ ಎಂದು ಸಹ್ಯಾದ್ರಿ ಸಂಸ್ಥೆಯ ನಿರ್ದೇಶಕ ಡಿ.ಎಲ್. ಪ್ರಭಾಕರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಮಾವೇಶದ ಮೂಲಕ ಯುವ ವಿಜ್ಞಾನಾಸಕ್ತರಿಗೆ ನೊಬೆಲ್ ಪುರಸ್ಕೃತರು, ಅಂತಾರಾಷ್ಟ್ರೀಯ ಮಟ್ಟದ ವಿಜ್ಞಾನಿಗಳು ಹಾಗೂ ಉದ್ಯಮಿಗಳನ್ನು ಭೇಟಿಯಾಗುವ ಹಾಗೂ ಅವರ ಜತೆ ಸಂವಾದ ನಡೆಸುವ ಅಪೂರ್ವ ಅವಕಾಶವನ್ನು ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಕಲ್ಪಿಸಿದೆ. ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗ ಕಂಡುಕೊಳ್ಳಲು ಇದು ಸಹಕಾರಿಯಾಗಲಿದೆ. ಸುಮಾರು 1,200 ವಿದ್ಯಾರ್ಥಿಗಳು ಈ ಸಮಾವೇಶದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದರು.

ಜ. 6ರಂದು ಸಂಜೆ ತಿರುಮಲ ದೇವಸ್ಥಾನದ ಪ್ರಧಾನ ಅರ್ಚಕ ಡಾ| ರಮಣ ದೀಕ್ಷಿತಲು ಅವರ ಉಪಸ್ಥಿತಿಯಲ್ಲಿ ರಾಜ್ಯ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಸಮಾವೇಶ ಉದ್ಘಾಟಿಸಲಿದ್ದಾರೆ. ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಮ್ ಪ್ರಾಜೆಕ್ಟ್ ಪ್ರದರ್ಶನ ಉದ್ಘಾಟಿಸಲಿದ್ದಾರೆ. ಅಲಹಾಬಾದ್ ಐಐಟಿ ಮಾಜಿ ನಿರ್ದೇಶಕ ಡಾ| ಎಂ.ಡಿ. ತಿವಾರಿ, ಆಲ್ ಕಾರ್ಗೋ ಲಾಜಿಸ್ಟಿಕ್ ಆಡಳಿತ ನಿರ್ದೇಶಕ ಶಶಿಕಿರಣ್ ಶೆಟ್ಟಿ, ಬೆಂಗಳೂರು ಡಾ| ಅಂಬೇಡ್ಕರ್ ಮೆಡಿಕಲ್ ಕಾಲೇಜಿನ ಅಧ್ಯಕ್ಷ ರಾಧಾಕೃಷ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮಂಜುನಾಥ ಭಂಡಾರಿ ಸಮಾವೇಶದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಅವರು ಹೇಳಿದರು.

ಜ. 10ರಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದ್ದು, ರಾಜ್ಯ ಐಟಿ, ಬಿಟಿ ಮತ್ತು ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ, ಐಎಎಸ್ ಅಧಿಕಾರಿ ಗೌರವ್ ಗುಪ್ತಾ, ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ ಕರಣಮ್ ಉಮಾ ಮಹೇಶ್ವರ ರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ| ಯು.ಎಂ. ಭೂಷಿ, ಮಂಜಪ್ಪ, ಸಿ.ಕೆ. ಮಂಜುನಾಥ್, ಅನುಷ್ ಬೇಕಲ್ ಉಪಸ್ಥಿತರಿದ್ದರು.

ಶುಕ್ರವಾರ, 5 ಜನವರಿ 2018 | ಪುಟಗಳು: 14+6+4(UDP +4) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 160
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ
VK
ವಿಜಯ ಕರ್ನಾಟಕ



ನಂಗೆ ಹಿಂದಿ ಮಾತ್ರವಲ್ಲ ಕನ್ನಡವೂ ಚೆನ್ನಾಗಿ ಗೊತ್ತು: ತರೂರ್‌ಗೆ ಸುಷ್ಮಾ ಟ್ವೀಟ್ ಉತ್ತರ P14



ತಲಾಕ್ ವಿಧೇಯಕ: ರಾಜ್ಯಸಭೆಯಲ್ಲಿ ಮುಂದುವರಿದ ವಾಕ್ಸಮರ, ಸಂಸತ್ ಸ್ಥಾಯಿ ಸಮಿತಿಗೆ ಒಪ್ಪಿಸಲು ಕೇಂದ್ರ ನಕಾರ? P10

ಐಪಿಎಲ್: 17 ಕೋಟಿ ರೂ.ಗೆ ಆರ್‌ಸಿಬಿನಲ್ಲೇ ಉಳಿದ ನಾಯಕ ವಿರಾಟ್ ಕೊಹ್ಲಿ P12

# ಅಡ್ಯಾರು: ನಾಳೆಯಿಂದ ಸಹ್ಯಾದ್ರಿ ಸಮಾವೇಶ

## ವಿದ್ಯಾರ್ಥಿಗಳು, ನೋಬೆಲ್ ಪುರಸ್ಕೃತರು, ವಿಜ್ಞಾನಿಗಳ ಜತೆ ಚರ್ಚೆ

**ಮಂಗಳೂರು:** ಅಡ್ಯಾರಿನ ಸಹ್ಯಾದ್ರಿ ಕಾಲೇಜು ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಜ.6ರಿಂದ 10ರವರೆಗೆ ವಿಜ್ಞಾನ ವಿಷಯದಲ್ಲಿ 'ಸಹ್ಯಾದ್ರಿ ಸಮಾವೇಶ' ಆಯೋಜಿಸಲಾಗಿದೆ ಎಂದು ಸಹ್ಯಾದ್ರಿ ಸಂಸ್ಥೆಯ ನಿರ್ದೇಶಕ ಡಿ.ಎಲ್.ಪ್ರಭಾಕರ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇದೇ ಮೊದಲ ಭಾರಿಗೆ ವಿಜ್ಞಾನ ವಿಷಯ ಕುರಿತು ಸಮಾವೇಶ ಏರ್ಪಡಿಸಲಾಗುತ್ತಿದೆ. ಆ ಮೂಲಕ ಯುವ ಜನಾಂಗಕ್ಕೆ ನೊಬೆಲ್ ಪುರಸ್ಕೃತರು ಅಂತಾರಾಷ್ಟ್ರೀಯ ಮಟ್ಟದ ವಿಜ್ಞಾನಿಗಳು ಹಾಗೂ ಕೈಗಾರಿಕೋದ್ಯಮಿಗಳನ್ನು ಭೇಟಿಯಾಗುವ ಹಾಗೂ ಅವರ ಜತೆ ಚರ್ಚಿಸುವ ಅಪೂರ್ವ ಅವಕಾಶವನ್ನು ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಕಲ್ಪಿಸಿದೆ ಎಂದು ಅವರು ಮಾಹಿತಿ ನೀಡಿದರು.

ನೊಬೆಲ್ ಪ್ರಶಸ್ತಿ ಪುರಸ್ಕೃತರು ಹಾಗೂ ವಿಜ್ಞಾನಿಗಳ ಜತೆ ಚರ್ಚಿಸುವಂತೆ ವಿದ್ಯಾರ್ಥಿಗಳು ಹಾಗೂ ಯುವ ಮನಸ್ಸುಗಳನ್ನು ಪ್ರೇರೇಪಿಸುವುದು ಈ ಸಮಾವೇಶದ ಪ್ರಮುಖ ಉದ್ದೇಶವಾಗಿದ್ದು, ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಉದ್ಯೋಗ ಕಂಡುಕೊಳ್ಳಲು ಇದು ಸಹಕಾರಿಯಾಗಲಿದೆ. ಸುಮಾರು 1200 ವಿದ್ಯಾರ್ಥಿಗಳು ಈ ಸಮಾವೇಶದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಈ ಚರ್ಚಾಗೋಷ್ಠಿಯು ತಾಂತ್ರಿಕ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಪ್ರಗತಿ ಹಾಗೂ ಸಂಯೋಜಿತ ತಂತ್ರಜ್ಞಾನವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುತ್ತದೆ. ಅಲ್ಲದೇ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಈ ಅವಕಾಶ ಕಲ್ಪಿಸುವ ಮೂಲಕ ಸಾಮಾಜಿಕ ಜವಾಬ್ದಾರಿಯನ್ನು ಪ್ರದರ್ಶಿಸಿದೆ ಎಂದು ಡಿ.ಎಲ್.ಪ್ರಭಾಕರ ತಿಳಿಸಿದರು.

ಜ.6ರಂದು ಸಂಜೆ ತಿರುಮಲ ದೇವಸ್ಥಾನದ ಪ್ರಧಾನ ಅರ್ಚಕ ಡಾ. ರಮಣ ದೀಕ್ಷಿತಲು ಉಪಸ್ಥಿತಿಯಲ್ಲಿ ರಾಜ್ಯ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಉದ್ಘಾಟಿಸಲಿದ್ದಾರೆ. ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್.ಸೀತಾರಾಮ್ ಪ್ರಾಜೆಕ್ಟ್ ಪ್ರದರ್ಶನ ಉದ್ಘಾಟಿಸಲಿದ್ದಾರೆ. ಅಲಹಾಬಾದ್ ಐಐಐಟಿ ಮಾಜಿ ನಿರ್ದೇಶಕ ಡಾ.ಎಂ.ಡಿ.ತಿವಾರಿ, ಆಲ್ ಕಾರ್ಗೋ ಲಾಜಿಸ್ಟಿಕ್ ಆಡಳಿತ ನಿರ್ದೇಶಕ ಶಶಿಕಿರಣ್ ಶೆಟ್ಟಿ, ಬೆಂಗಳೂರು ಡಾ. ಅಂಬೇಡ್ಕರ್ ಮೆಡಿಕಲ್ ಕಾಲೇಜಿನ ಅಧ್ಯಕ್ಷ ರಾಧಾಕೃಷ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮಂಜುನಾಥ ಭಂಡಾರಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಜ.10ರಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದ್ದು, ರಾಜ್ಯ ಐಟಿ, ಬಿಟಿ ಮತ್ತು ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ, ಐಎಎಸ್ ಅಧಿಕಾರಿ ಗೌರವ್ ಗುಪ್ತಾ, ಸುರತ್ಕಲ್ ಎನ್‌ಐಟಿಕೆ ನಿರ್ದೇಶಕರಾದ ಕರಣಮ್ ಉಮಾ ಮಹೇಶ್ವರ ರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ.ಯು.ಎಂ.ಭೂಷಿ, ಕಾರ್ಯಕ್ರಮದ ಮುಖ್ಯ ಸಂಯೋಜಕ ಚಿ.ಕೆ.ಮಂಜುನಾಥ್, ಸಂಚಾಲಕ ಅನುಷ್ ಬೇಕಲ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮುಂಜಾನೆ ಮಾತು
ವೃಕ್ಷಕ್ಕೆ ದುಃಖ ಬೇರು ಎನಿಸಿದರೆ, ಸಂತೋಷ ಕೊಂಬೆಗಳು. ಬೇರು ಕೊಂಬೆಗಳೆರಡೂ ಮರದ ಲವಲವಿಕೆಗೆ ಅಗತ್ಯ. ಅಂತೆಯೇ ಜೀವನಕ್ಕೆ ದುಃಖ ಮತ್ತು ಸಂತೋಷಗಳು.

ವಿಜಯವಾಣಿ ★1 ಕನ್ನಡ ದಿನಪತ್ರಿಕೆ
ಕನ್ನಡಿಗರ ಧ್ವನಿ
2018 ಹೊಸ ವರುಷ ತರಲಿ ಹರುಷ

ಮೋದಿಗೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI ● MANGALURU | ಮಂಗಳೂರು ● ಸಂಪುಟ 6 ● ಸಂಚಿಕೆ 277
vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 5 ಜನವರಿ 2018 | ಶುಕ್ರವಾರ | 5 JA

Sahyadri College of Engineering & Management, Adyar, Mangalore-7
ನಂ.
CENTRAL LIBRARY



# ನಾಳೆಯಿಂದ ಸಹ್ಯಾದ್ರಿ ಸಮಾವೇಶ

## ನೊಬೆಲ್ ಪುರಸ್ಕೃತರು, ವಿಜ್ಞಾನಿಗಳ ಜತೆ ವಿದ್ಯಾರ್ಥಿಗಳ ಚರ್ಚೆ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಅಡ್ಯಾರಿನ ಸಹ್ಯಾದ್ರಿ ಕಾಲೇಜು ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಜ.6ರಿಂದ 10ರ ತನಕ ವಿಜ್ಞಾನ ವಿಷಯದಲ್ಲಿ ಸಹ್ಯಾದ್ರಿ ಸಮಾವೇಶ ಆಯೋಜಿಸಲಾಗಿದೆ.

ಯುವ ಜನಾಂಗಕ್ಕೆ ನೊಬೆಲ್ ಪುರಸ್ಕೃತರು ಅಂತಾರಾಷ್ಟ್ರೀಯ ಮಟ್ಟದ ವಿಜ್ಞಾನಿಗಳು ಹಾಗೂ ಕೈಗಾರಿಕೋದ್ಯಮಿಗಳನ್ನು ಭೇಟಿಯಾಗುವ ಹಾಗೂ ಅವರ ಜತೆ ಚರ್ಚಿಸುವ ಅಪೂರ್ವ ಅವಕಾಶವನ್ನು ಈ ಮೂಲಕ ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಕಲ್ಪಿಸಿದೆ ಎಂದು ಸಹ್ಯಾದ್ರಿ ಸಂಸ್ಥೆಯ ನಿರ್ದೇಶಕ ಡಿ.ಎಲ್.ಪ್ರಭಾಕರ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

» **ಸಮಾವೇಶದಲ್ಲಿ 1,200 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ**

ನೊಬೆಲ್ ಪ್ರಶಸ್ತಿ ಪುರಸ್ಕೃತರು ಹಾಗೂ ವಿಜ್ಞಾನಿಗಳ ಜತೆ ಚರ್ಚಿಸುವಂತೆ ವಿದ್ಯಾರ್ಥಿಗಳು ಹಾಗೂ ಯುವ ಮನಸ್ಸುಗಳನ್ನು ಪ್ರೇರೇಪಿಸುವುದು ಸಮಾವೇಶದ ಪ್ರಮುಖ ಉದ್ದೇಶ. ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗ ಕಂಡುಕೊಳ್ಳಲು ಇದು ಸಹಕಾರಿಯಾಗಿದ್ದು, 1,200 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಚರ್ಚಾಗೋಷ್ಠಿಯು ತಾಂತ್ರಿಕ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಪ್ರಗತಿ ಹಾಗೂ ಸಂಯೋಜಿತ ತಂತ್ರಜ್ಞಾನದ ಕುರಿತು ನಿಖರ ತಿಳಿವಳಿಕೆ ಪಡೆಯಲು, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತಮ್ಮ ಸಾಮಾಜಿಕ ಜವಾಬ್ದಾರಿ ಅರಿತುಕೊಳ್ಳಲು ನೆರವಾಗಲಿದೆ.

ಜ.6ರಂದು ಸಾಯಂಕಾಲ ತಿರುಮಲ ದೇವಸ್ಥಾನದ ಪ್ರಧಾನ ಅರ್ಚಕ ಡಾ.ರಮಣ ದೀಕ್ಷಿತಲು ಉಪಸ್ಥಿತಿಯಲ್ಲಿ ರಾಜ್ಯ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಉದ್ಘಾಟಿಸಲಿದ್ದಾರೆ. ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್.ಸೀತಾರಾಮ್ ಪ್ರಾಜೆಕ್ಟ್ ಪ್ರದರ್ಶನ ಉದ್ಘಾಟಿಸುವರು. ಅಲಹಾಬಾದ್ ಐಐಐಟಿ ಮಾಜಿ ನಿರ್ದೇಶಕ ಡಾ.ಎಂ.ಡಿ.ತಿವಾರಿ, ಆಲ್‌ಕಾರ್ಗೋ ಲಾಜಿಸ್ಟಿಕ್ ಆಡಳಿತ ನಿರ್ದೇಶಕ ಶಶಿಕಿರಣ್ ಶೆಟ್ಟಿ, ಬೆಂಗಳೂರು ಡಾ.ಅಂಬೇಡ್ಕರ್ ಮೆಡಿಕಲ್ ಕಾಲೇಜಿನ ಅಧ್ಯಕ್ಷ ರಾಧಾಕೃಷ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಂಜುನಾಥ ಭಂಡಾರಿ ಅಧ್ಯಕ್ಷತೆ ವಹಿಸಲಿದ್ದಾರೆ.

ಜ.10ರಂದು ಸಾಯಂಕಾಲ ನಡೆಯುವ ಸಮಾರೋಪದಲ್ಲಿ ರಾಜ್ಯ ಐಟಿ, ಬಿಟಿ ಮತ್ತು ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ, ಐಎಎಸ್ ಅಧಿಕಾರಿ ಗೌರವ್ ಗುಪ್ತಾ, ಸುರತ್ಕಲ್ ಎನ್‌ಐಟಿಕೆ ನಿರ್ದೇಶಕ ಕರಣಮ್ ಉಮಾ ಮಹೇಶ್ವರ ರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ.ಯು.ಎಂ.ಭೂಷಿ, ಕಾರ್ಯಕ್ರಮದ ಮುಖ್ಯ ಸಂಯೋಜಕ ಚಿ.ಕೆ.ಮಂಜುನಾಥ್, ಸಂಚಾಲಕ ಅನುಷ್ ಬೇಕಲ್ ಸುದ್ದಿಗೋಷ್ಠಿಯಲ್ಲಿದ್ದರು.

### ಭಾಗವಹಿಸುವ ನೊಬೆಲ್ ಪುರಸ್ಕೃತ ವಿಜ್ಞಾನಿಗಳು

**ಅಡಾ ಇ. ಯೊನತ್ (ರಸಾಯನಶಾಸ್ತ್ರ) ಮತ್ತು ಸರ್ಜ್ ಹೆರ್ಯೋಚ್ (ಭೌತಶಾಸ್ತ್ರ) ಸಮಾವೇಶದಲ್ಲಿ ಭಾಗವಹಿಸುವ ನೊಬೆಲ್ ಪುರಸ್ಕೃತರು. ಉಳಿದಂತೆ ಇತರ ವಿಜ್ಞಾನಿಗಳಾದ ಜೋಸೆಫ್ ಸಿಫಾಕಿಸ್ (ಟರ್ನಿಂಗ್ ಅವಾರ್ಡ್ ಇನ್ ಕಂಪ್ಯೂಟರ್ ಸೈನ್ಸ್), ರೊಬೊಟಿಕ್ಸ್ ಸಂಶೋಧಕ ರಾಬರ್ಟ್ ಸಿ ರಿಚರ್‌ಸನ್, ಯುವ ಯುಎಸ್‌ಎದ ಬಫೆಲೊ ವಿಶ್ವವಿದ್ಯಾಲಯದ ಅಧ್ಯಕ್ಷ ಸತೀಶ್ ಕೆ. ತ್ರಿಪಾಟಿ, ಫ್ಲೋರಿಡಾ ವಿಶ್ವವಿದ್ಯಾಲಯದ ಪ್ರೊ. ಎಸ್. ಎಸ್. ಅಯ್ಯಂಗಾರ್, ಒಹಿಯೊ ವಿಶ್ವವಿದ್ಯಾಲಯದ ಅನಿಶ್ ಅರೊರಾ, ಮೆಕ್‌ಗಿಲ್ ವಿಶ್ವವಿದ್ಯಾಲಯದ ಪ್ರೊ. ಸತ್ಯಪ್ರಕಾಶ್, ಅಮೆರಿಕದ ಎಂಐಟಿ ಇಡಿಎಕ್ಸ್‌ನ ಸಿಇಒ ಪದ್ಮಶ್ರೀ ಅನಂತ ಅಗರ್‌ವಾಲ್, ಎಂಐಟಿಯ ಪ್ರಾಂಶುಪಾಲ ಅನುರಾಧಾ ಅಗರ್‌ವಾಲ್ ಪಾಲ್ಗೊಳ್ಳುವರು.**